# D

SL. No. : N

ಒಟ್ಟು ಪ್ರಶ್ನೆಗಳ ಸಂಖ್ಯೆ : 64 ]
Total No. of Questions : 64 ]

**CCE PR**
**UN-REVISED**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8
[ Total No. of Printed Pages : 8

**ಸಂಕೇತ ಸಂಖ್ಯೆ : 01-K**

**Code No. : 01-K**

# ವಿಷಯ : ಪ್ರಥಮ ಭಾಷೆ — ಕನ್ನಡ

# Subject : First Language — KANNADA

**(ಹೊಸ ಪಠ್ಯಕ್ರಮ / New Syllabus)**

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Repeater)**

ದಿನಾಂಕ : 22. 06. 2018 ]
[ Date : 22. 06. 2018

ಸಮಯ : ಬೆಳಿಗ್ಗೆ 9-30 ರಿಂದ 12-45 ರವರೆಗೆ ]
[ Time : 9-30 A.M. to 12-45 P.M.

ಗರಿಷ್ಠ ಅಂಕಗಳು : 125 ]
[ Max. Marks : 125

***ಪರೀಕ್ಷಾರ್ಥಿಗಳಿಗೆ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 64 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

ಇಲ್ಲಿ ಕತ್ತರಿಸಿ

TEAR HERE TO OPEN THE QUESTION PAPER
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

Tear here



https://www.karnatakaboard.com/

## ವಿಭಾಗ – 'ಎ'

### (ಪಠ್ಯಗಳ ಅಧ್ಯಯನ – ಗದ್ಯ, ಪದ್ಯ, ಪೋಷಕ ಅಧ್ಯಯನ)

**ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ :** $16 \times 1 = 16$

1. ಶ್ರೀರಾಮನ ತಂದೆಯ ಹೆಸರೇನು ?
2. ನಾಡ ಭವ್ಯ ಜನರು ಬುಕ್ಕರಾಯನ ಬಳಿ ಏನೆಂದು ಬಿನ್ನಹ ಮಾಡಿದರು ?
3. ವಿಶ್ವೇಶ್ವರಯ್ಯನವರನ್ನು ದಿವಾನರನ್ನಾಗಿ ನೇಮಿಸಿದವರು ಯಾರು ?
4. 'ಮಲೆಗಳಲ್ಲಿ ಮದುಮಗಳು' ಈ ಕಾದಂಬರಿಯನ್ನು ಬರೆದವರು ಯಾರು ?
5. 'ಗಾಂಡೀವಿ' ಎಂದು ಬಿರುದಾಂಕಿತರು ಯಾರು ?
6. ಜೇಡರದಾಸಿಮಯ್ಯನವರು ಶಿವನಿಗೆ ಯಾರ ಭಕ್ತಿ ಹಿತವೆನಿಸುತ್ತದೆ ಎಂದು ಹೇಳಿದ್ದಾರೆ ?
7. ಹಸಿದು ಮಲಗಿದ್ದ ಹುಲಿಯು ಏನೆಂದು ಯೋಚಿಸಿತು ?
8. ದಿಕ್ಕಿಲ್ಲದೆ ನರಳಾಡುವ ದೀನರಿಗೆ ಕವಯಿತ್ರಿ ಏನಾಗಬೇಕೆಂದು ಬಯಸಿದ್ದಾರೆ ?
9. ಸು.ರಂ. ಎಕ್ಕುಂಡಿಯವರ ಪ್ರಕಾರ ಯಾವುದು ಸರ್ವನಾಶದ ಸಿದ್ಧಿಯಾಗಿದೆ ?
10. ಜೀವನದಲ್ಲಿ ಯಾವುದಕ್ಕೆ ಹೆಚ್ಚಿನ ಸ್ಥಾನವಿದೆಯೆಂದು ಗೋಕಾಕರು ಹೇಳಿದ್ದಾರೆ ?
11. ಕುರುಕುಲವೆಂಬ ತೋಟದಲ್ಲಿ ಉಳಿದಿರುವ 'ಪೆರ್ಮರ' ಯಾರು ?
12. ಕಾಲಪಕ್ಷಿಯ ಕಣ್ಣುಗಳು ಯಾವುದೆಂದು ಬೇಂದ್ರೆಯವರು ಹೇಳಿದ್ದಾರೆ ?
13. ಜಿ.ಎಸ್. ಶಿವರುದ್ರಪ್ಪನವರು ಕಾಡುಮೇಡುಗಳ ಸ್ಥಿತಿ ಏನಾಗಿದೆ ಎಂದು ಹೇಳಿದ್ದಾರೆ ?
14. ಕರ್ಣನ ಕಿವಿಯಲ್ಲಿ ಉಭಯವನ್ನು ಬಿತ್ತಿದವರು ಯಾರು ?
15. 'ನನ್ನಾಸೆ' ಕವನದಲ್ಲಿ ಕವಯಿತ್ರಿ ಮಣ್ಣಮೇಲೊಂದು ಮರವಾಗಿ ಯಾರಿಗೆ ನೆರಳಾಗಬೇಕು ಎಂದು ಆಸೆಪಟ್ಟಿದ್ದಾರೆ ?
16. ಪಾರಿವಾಳದ ಪುಟ್ಟಮರಿಗಳು ಯಾವುದರಲ್ಲಿ ಸಿಲುಕಿಕೊಂಡವು ?

**ಈ ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** $16 \times 2 = 32$

17. 'ಧರ್ಮಸಮದೃಷ್ಟಿ' ಪಾಠದಲ್ಲಿ ರಾಮಾನುಜಾಚಾರ್ಯರ ಗುಣವಿಶೇಷತೆಯನ್ನು ಹೇಗೆ ಕೊಂಡಾಡಲಾಗಿದೆ ?
18. ವಿಶ್ವೇಶ್ವರಯ್ಯನವರು ಮೈಸೂರು ಸಂಸ್ಥಾನದಲ್ಲಿ ಮುಖ್ಯ ಎಂಜಿನಿಯರ್ ಆಗಿ ಮೂರು ವರ್ಷಗಳಲ್ಲಿ ಮಾಡಿದ ಅಭಿವೃದ್ಧಿ ಕಾರ್ಯಗಳನ್ನು ತಿಳಿಸಿ.
19. ಪರಮಹಂಸರ ವ್ಯಕ್ತಿತ್ವದ ವೈಶಿಷ್ಟ್ಯ ಎಂಥದ್ದು ?
20. ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಯನ್ನು ತಿಳಿಸಿ.
21. ಬಸವಣ್ಣನವರ ವಚನಗಳಲ್ಲಿ ಕಂಡುಬರುವ ಚಂಚಲ ಮನಸ್ಸು ಮತ್ತು ಸ್ವಭಾವಗಳನ್ನು ವಿವರಿಸಿ.
22. 'ಗಡಿಯ ಆಚೆ–ಈಚೆ ಜೀವಿಗಳು ಹೇಗೆ ಶವವಾದವು' ಎಂಬುದನ್ನು ದು. ಸರಸ್ವತಿಯವರ ಮಾತುಗಳಲ್ಲಿ ಬರೆಯಿರಿ.



https://www.karnatakaboard.com/

23. ಎಚ್. ನರಸಿಂಹಯ್ಯನವರ ಪ್ರಕಾರ 'ವಿಶ್ವಧರ್ಮ' ಯಾವಾಗ ರೂಪಿತವಾಗಬಲ್ಲುದು ?

24. ಬಾಳಿನಲ್ಲಿ ತೃಪ್ತಿ ದೊರಕಬೇಕಾದರೆ ಏನು ಮಾಡಬೇಕೆಂಬುದು ಸ್ವಾಮಿ ವಿವೇಕಾನಂದರ ಅಭಿಪ್ರಾಯವಾಗಿತ್ತು ?

25. 'ಬೀಸುವ ಕಲ್ಲು' ಎಂಬ ಅರ್ಥ ಬರಲು ಜನಪದರು ಹೇಳಿರುವ ಒಗಟನ್ನು ಬರೆಯಿರಿ.

26. ಆದಿಕವಿ ಪಂಪನು ತನ್ನ ಹೆಸರನ್ನು ಬಂಡೆಯ ಮೇಲೆ ಏಕೆ ಕೆತ್ತಿಸಲಿಲ್ಲ ?

27. 'ಧರ್ಮಸಮದೃಷ್ಟಿ' ಶಾಸನದಲ್ಲಿ ಬುಕ್ಕರಾಯನನ್ನು ಹೇಗೆಂದು ವರ್ಣಿಸಲಾಗಿದೆ ?

28. ಸಿದ್ಧಲಿಂಗಯ್ಯನವರು ಹೇಳಿದ ಕಥೆಯಲ್ಲಿ ಬರುವ ದೇವತೆ ಹಾಗೂ ಜನರ ನಡುವಿನ ಸಂವಾದ ಬರೆಯಿರಿ.

29. ಮೂರ್ತಿರಾಯರ ಅಭಿಪ್ರಾಯದಂತೆ ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣವೇನು ?

30. ಧರ್ಮಾಧಿಕರಣರು "ಈತನ ಮಾತು ಅಶ್ರುತಪೂರ್ವಮ್" ಎನ್ನಲು ಕಾರಣವೇನು ?

31. ಹಲಗಲಿಗೆ ದಂಡು ಬರಲು ಕಾರಣವೇನು ?

32. ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ವಿವರಿಸಿ.

**ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ :** $6 \times 3 = 18$

33. "ಕಲೋಪಾಸಕನಿಗೆ ಸಮಾಜದಲ್ಲಿ ಯಾವ ಹೊಣೆಯೂ ಇರಬಾರದು."

34. "ನಿನ್ನ ಪಟುವಗೆ ನಮ್ಮ ಕುಲಮನೆಲ್ಲಮನಳಿವ ಬಗೆ"

35. "ಪಗೆಯುಂ ನಣ್ಪುಂ ಕಯ್ಕೊಂಡ ಕಜ್ಜದಿನಲ್ತೆ."

36. "ಕಾಣದೆ ಹೋಯಿತು ಕೆಟ್ಟು ವರ್ಣಿಸಿ ಹೇಳಿದೆ ಕಂಡಷ್ಟು"

37. "ಆದರ್ಶ ಪುರುಷರೊಬ್ಬರು ದಿವಾನರಾದದ್ದು ಮೈಸೂರು ಸಂಸ್ಥಾನದ ಪುಣ್ಯ ವಿಶೇಷವೇ ಸರಿ."

38. "ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು."

**ಈ ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿ / ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ :** $2 \times 3 = 6$

39. ಪು.ತಿ. ನರಸಿಂಹಾಚಾರ್

40. ಕವಿ ಲಕ್ಷ್ಮೀಶ

41. **ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :** $1 \times 4 = 4$

ಕೊರಳ ಸೆರೆ ಹಿಗ್ಗಿದವು ದೃಗುಜಲ

...........................................................................

...........................................................................

...........................................................................

ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ ||

*ಅಥವಾ*



https://www.karnatakaboard.com/

ಮಾರಿಗೌತಣವಾಯ್ತು ನಾಳಿನ

.....................................................................

.....................................................................

.....................................................................

ವೀರರ್ಶೈವರ ನೋಯಿಸೆನು ರಾಜೀವಸಖನಾಣೆ ॥

42. **ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ :** 1 × 4 = 4

ರಾಜ್ಯದ ಸಾಮ್ರಾಜ್ಯದ ತೆನೆ ಒಕ್ಕಿ

ಮಂಡಲ–ಗಿಂಡಲಗಳ ಗಡ ಮುಕ್ಕಿ

ತೇಲಿಸಿ ಮುಳುಗಿಸಿ ಖಂಡ–ಖಂಡಗಳ

ಸಾರ್ವಭೌಮರಾ ನೆತ್ತಿಯ ಕುಕ್ಕಿ

ಹಕ್ಕಿ ಹಾರುತಿದೆ ನೋಡಿದಿರಾ ?

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** 2 × 4 = 8

43. ಶಾಲೆಗೆ ಹೋದ ಉದ್ದೇಶವನ್ನು ಗೊರೂರರು ಮರೆತ ಪ್ರಸಂಗದ ಸ್ವಾರಸ್ಯವನ್ನು ನಿಮ್ಮ ಮಾತಿನಲ್ಲಿ ಬರೆಯಿರಿ.

***ಅಥವಾ***

ಅಮರಿಕಾದ ಮಗಳ ಮನೆಯಲ್ಲಿ ವಿದ್ಯುತ್ ಒಲೆಯಿಂದ ಉಂಟಾದ ತೊಂದರೆಯನ್ನು ಗೊರೂರರು ಪರಿಹರಿಸಿಕೊಂಡ ಸನ್ನಿವೇಶವನ್ನು ಕುರಿತು ಬರೆಯಿರಿ.

44. ಜಿ.ಎಸ್. ಶಿವರುದ್ರಪ್ಪನವರು ನಾಳಿನ ಕನಸನ್ನು ಬಿತ್ತುವಸಲುವಾಗಿ ಯಾವ ಸಂಕಲ್ಪವನ್ನು ಕೈಗೊಳ್ಳಬೇಕೆಂದು ಹೇಳಿದ್ದಾರೆ ?

***ಅಥವಾ***

ಸಂಕಲ್ಪ ಮತ್ತು ಅನುಷ್ಠಾನದ ಕುರಿತು ಜಿ.ಎಸ್. ಶಿವರುದ್ರಪ್ಪನವರ ಅಭಿಪ್ರಾಯವನ್ನು ನಿಮ್ಮ ಮಾತಿನಲ್ಲಿ ವಿವರಿಸಿ.

45. **ಈ ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :** 2 × 2 = 4

ಭಾರತ ತನ್ನ ಇತಿಹಾಸದಲ್ಲಿ ಕಂಡ ಅತ್ಯಂತ ವರ್ಣರಂಜಿತ ವ್ಯಕ್ತಿತ್ವ ಕೌಟಿಲ್ಯನದು. ತನ್ನ ಹಠದ ಪಟ್ಟನ್ನು ಸಡಿಲಿಸದೆ, ಮನೋನಿಶ್ಚಯದಂತೆ ಅಪೂರ್ವ ಕುಶಲತೆಯನ್ನು ತೋರಿದ ಪ್ರತಿಭಾವಂತನೀತ. ಸರಳ ತಂತ್ರೋಪಾಯಗಳಿಂದ ಚಂದ್ರಗುಪ್ತನ ಶತ್ರುಬಲವನ್ನು ನಿರಾಲಂಬನಗೊಳಿಸಿ ಮೌರ್ಯವಂಶದ ಸ್ಥಾಪನೆಗೆ ಮಾರ್ಗದರ್ಶಕನಾಗುತ್ತಾನೆ. ತನ್ನನ್ನೇ ಹಿಂಬಾಲಿಸಿ ಬಂದ ರಾಜಲಕ್ಷ್ಮೀ, ಅಧಿಕಾರಗಳನ್ನು ದೂರೀಕರಿಸಿ



https://www.karnatakaboard.com/

ವಿರಕ್ತನಂತೆ ಆಶ್ರಮ ವಾಸಿಯಾಗುತ್ತಾನೆ. ಚಾಣಕ್ಯನ ಪ್ರಕಾರ ಯುದ್ಧದಲ್ಲಿ ಮೂರು ವಿಧಗಳು, ಮೊದಲನೆಯದು ಪ್ರಕಾಶಯುದ್ಧ – ಸೂಚಿತಸ್ಥಳದಲ್ಲಿ ನಿರ್ದಿಷ್ಟ ಸಮಯಕ್ಕೆ ನಡೆಯುವ ಸಂಗ್ರಾಮ. ಎರಡನೆಯದು ಕೂಟಯುದ್ಧ – ತಂತ್ರಗಳ ಮೂಲಕ ಯುದ್ಧ ಮಾಡುವುದು. ಮೂರನೆಯದು ಮೌನಯುದ್ಧ – ಶತ್ರು ಅಧಿಕಾರಿಗಳನ್ನು ನಾಶಪಡಿಸಲು ಗುಪ್ತಕಾರ್ಯಾಚರಣೆ ನಡೆಸುವುದು. ಯಾವಾಗ ರಾಜ ಶತ್ರುಗಳಿಗಿಂತ ಬಲಿಷ್ಠನಾಗಿದ್ದು ಪರಿಸ್ಥಿತಿ ಅನುಕೂಲಕರವಾಗಿರುತ್ತದೋ ಆಗ ಅವನು ಮುಕ್ತಯುದ್ಧವನ್ನೇ ಮಾಡಬೇಕು. ಸೂಚಿತ ಸ್ಥಳದಲ್ಲಿ ನಿರ್ದಿಷ್ಟ ಸಮಯದಲ್ಲಿ ನಡೆಯುವ ಮುಕ್ತ ಯುದ್ಧವೇ ಧರ್ಮಯುದ್ಧ.

*ಪ್ರಶ್ನೆಗಳು :*

ಅ) ಚಾಣಕ್ಯನು ಮೂರು ಬಗೆಯ ಯುದ್ಧಗಳನ್ನು ಹೇಗೆ ವಿವರಿಸಿದ್ದಾನೆ ?

ಆ) ಕೌಟಿಲ್ಯನ ವ್ಯಕ್ತಿ ವೈಶಿಷ್ಟ್ಯತೆ ಕುರಿತು ಬರೆಯಿರಿ.

## ವಿಭಾಗ – 'ಬಿ'

### (ಅನ್ವಯಿಕ ವ್ಯಾಕರಣ, ಅಲಂಕಾರ ಹಾಗೂ ಛಂದಸ್ಸು)

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** $10 \times 1 = 10$

46. 'ಶರಚ್ಚಂದ್ರ' ಈ ಸಂಧಿಗೆ ಉದಾಹರಣೆಯಾಗಿದೆ

(ಎ) ಯಣ್ ಸಂಧಿ (ಬಿ) ಜಶ್ತ್ವ ಸಂಧಿ

(ಸಿ) ಶ್ಚುತ್ವ ಸಂಧಿ (ಡಿ) ಅನುನಾಸಿಕ ಸಂಧಿ

47. 'ತಿನ್ನುತ್ತಾನೆ' ಈ ಕ್ರಿಯಾಪದದ ವಿಧ್ಯರ್ಥಕ ರೂಪ

(ಎ) ತಿನ್ನಲಿ (ಬಿ) ತಿನ್ನನು

(ಸಿ) ತಿಂದಾನು (ಡಿ) ತಿನ್ನುವನು

48. ಸಂಬೋಧನೆಯ ಮುಂದೆ ಹಾಗೂ ಕರ್ತೃ, ಕರ್ಮ, ಕ್ರಿಯಾ ಪದಗಳಿಗೆ ಬೇರೆಬೇರೆ ವಿಶೇಷಣಗಳು ಬರುವಾಗ ಕೊನೆಯ ವಿಶೇಷಣ ಬಿಟ್ಟು ಉಳಿದವುಗಳ ಮುಂದೆ ಬಳಸುವ ಚಿಹ್ನೆ

(ಎ) ಉದ್ಧರಣ (ಬಿ) ಪ್ರಶ್ನಾರ್ಥಕ

(ಸಿ) ಅರ್ಧವಿರಾಮ (ಡಿ) ಅಲ್ಪವಿರಾಮ

49. ಶಾನುಭೋಗರು ಊರು ಸೇರಿಕೊಳ್ಳಲು ಬೇಗಬೇಗ ನಡೆದರು; ಆದರೆ ಆಗಲೇ ರಾತ್ರಿ ಹೆಜ್ಜೆಯಿಟ್ಟಿತ್ತು. ಈ ವಾಕ್ಯವು

(ಎ) ಮಿಶ್ರ ವಾಕ್ಯ (ಬಿ) ಸಾಮಾನ್ಯ ವಾಕ್ಯ

(ಸಿ) ಸಂಯೋಜಿತ ವಾಕ್ಯ (ಡಿ) ಪ್ರಶ್ನಾರ್ಥಕ ವಾಕ್ಯ

50. ಕ್ರಿಯಾ ಸಮಾಸಕ್ಕೆ ಉದಾಹರಣೆ ಇದು

(ಎ) ಬೆಟ್ಟದಾವರೆ (ಬಿ) ಕಂಗೆಡು

(ಸಿ) ಕಡೆಗಣ್ಣು (ಡಿ) ಆ ಕಲ್ಲು



https://www.karnatakaboard.com/

51. 'ಅಜಮಾಯಿಷಿ' ಪದವು ಕನ್ನಡಕ್ಕೆ ಈ ಭಾಷೆಯಿಂದ ಬಂದಿದೆ

(ಎ) ಪಾರ್ಸಿ (ಬಿ) ಇಂಗ್ಲಿಷ್

(ಸಿ) ಪೋರ್ಚುಗೀಸ್ (ಡಿ) ಉರ್ದು

52. 'ಸಹದೇವ' ಪದವು ನಾಮಪದದ ಈ ಗುಂಪಿಗೆ ಸೇರುತ್ತದೆ

(ಎ) ರೂಢನಾಮ (ಬಿ) ಅನ್ವರ್ಥನಾಮ

(ಸಿ) ಸರ್ವನಾಮ (ಡಿ) ಅಂಕಿತನಾಮ

53. 'ಕಾರ್ಯಂ' ಪದವು ಈ ವಿಭಕ್ತಿಯಲ್ಲಿದೆ

(ಎ) ಪ್ರಥಮಾ (ಬಿ) ದ್ವಿತೀಯಾ

(ಸಿ) ತೃತೀಯಾ (ಡಿ) ಚತುರ್ಥಿ

54. ಯಾವುದಾದರೂ ಕ್ರಿಯೆ ನಡೆದ ರೀತಿಯನ್ನು ಹೇಳುವಂತಹ ಅವ್ಯಯವನ್ನು ಹೀಗೆನ್ನುತ್ತೇವೆ

(ಎ) ಅನುಕರಣಾವ್ಯಯ (ಬಿ) ಸಂಬಂಧಾರ್ಥಕಾವ್ಯಯ

(ಸಿ) ಸಾಮಾನ್ಯ ಅವ್ಯಯ (ಡಿ) ಭಾವಸೂಚಕಾವ್ಯಯ

55. ಆತ್ಮಾರ್ಥಕ ಸರ್ವನಾಮಕ್ಕೆ ಉದಾಹರಣೆಯಿದು

(ಎ) ಯಾರು (ಬಿ) ತಾವು

(ಸಿ) ನೀವು (ಡಿ) ನಾವು

**ಈ ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ :** 4 × 1 = 4

56. ಸುತ್ತಮುತ್ತ : ಜೋಡಿಪದ :: ಇರುಳಿರುಳು : ......................... .

57. ಅಂಕುಶ : ಅಂಕುಸ :: ಅರ್ಕ : ......................... .

58. ನೇಸರ : ಸೂರ್ಯ :: ನೀರದ : ......................... .

59. ಹಿರಿಮೆ : ತದ್ಧಿತಾಂತ ಭಾವನಾಮ :: ಮಾಡಲಿಕ್ಕೆ : ......................... .

60. **ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ :** 1 × 3 = 3

ಕುರುಕುಳನಂದನಂ ಪವನನಂದನನೆಂಬ ಮದಾಂಧಗಂಧಸಿಂ

***ಅಥವಾ***

ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ
ನೊರ್ವನೇ ವೀರನಾತನ ಯಜ್ಞತುರಗಮಿದು
ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ ।

61. **ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ :** 1 × 3 = 3

"ಒಳಗಿನ ಮಂದಿ ಗುಂಡು ಹೊಡಿದರೊ ಮುಂಗಾರಿ ಸಿಡಿಲ ಸಿಡಿದ್ಹಾಂಗ."

***ಅಥವಾ***

"ಮಾತುಬಲವನಿಗೆ ಜಗಳವಿಲ್ಲ; ಊಟಬಲ್ಲವನಿಗೆ ರೋಗವಿಲ್ಲ."



https://www.karnatakaboard.com/

## ವಿಭಾಗ – 'ಸಿ'

## (ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)

62. **ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ :** 1 × 3 = 3

* ಮಿಂಚಿಹೋದ ಕಾಲಕ್ಕೆ ಚಿಂತಿಸಿ ಫಲವಿಲ್ಲ
* ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ
* ಹುಟ್ಟುಗುಣ ಘಟ್ಟ ಹತ್ತಿದರೂ ಹೋಗದು

63. ನಿಮ್ಮನ್ನು ಸೋಮನಾಥಪುರದ ಸರ್ಕಾರಿ ಪ್ರೌಢಶಾಲೆಯ 'ಸಮೀರ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ಆಚರಿಸಿದ 'ಯೋಗ ದಿನಾಚರಣೆ' ಕಾರ್ಯಕ್ರಮದ ವರದಿಯನ್ನು ಪ್ರಕಟಿಸುವಂತೆ ಕೋರಿ 'ವಿದ್ಯಾರ್ಥಿ ಮಿತ್ರ' ಪತ್ರಿಕಾ ಸಂಪಾದಕರಿಗೊಂದು ಮನವಿ ಪತ್ರ ಬರೆಯಿರಿ. 1 × 5 = 5

***ಅಥವಾ***

ನಿಮ್ಮನ್ನು ಆವಂತಿಪುರದ ಪ್ರಗತಿ ವಿದ್ಯಾಲಯದ 'ಅನ್ವೇಷ' ಎಂದು ಭಾವಿಸಿಕೊಂಡು, ಹಳೇಬೀಡಿನ ಲಕ್ಷ್ಮೀಪುರ ಬಡಾವಣೆಯಲ್ಲಿ ವಾಸವಾಗಿರುವ ಸಹೋದರಿ 'ಚಿರಂತ'ಳಿಗೆ 'ಶಾಲಾ ವಾರ್ಷಿಕೋತ್ಸವ'ದ ವಿವರವನ್ನು ತಿಳಿಸಿ ಪತ್ರವೊಂದನ್ನು ಬರೆಯಿರಿ.

64. **ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆ ಇಲ್ಲದಂತೆ ಪ್ರಬಂಧ ಬರೆಯಿರಿ :** 1 × 5 = 5

* ಹೆಣ್ಣು ಮಕ್ಕಳ ಶಿಕ್ಷಣದ ಮಹತ್ವ
* ಸಾವಯವ ಬೇಸಾಯದ ಪ್ರಾಮುಖ್ಯತೆ
* ಶಿಕ್ಷಣದಲ್ಲಿ ತಂತ್ರಜ್ಞಾನದ ಬಳಕೆ



https://www.karnatakaboard.com/

https://www.karnatakaboard.com/